**ಮೋಟಾರು ವಾಹನ ಅಪಘಾತಗಳ ಪರಿಹಾರ ಮಂಡಳಿ, ಬೆಂಗಳೂರು,**
**1ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು**
**ಎಂ.ವಿ.ಸಿ.ಃ 8795/2023**

ಪಿ.ಡಬ್ಲೂ 3

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ದೇವೇಂದ್ರ ಕುಮಾರ್ |
| **ತಂದೆಯ ಹೆಸರು** | ಃ | ಭೋಜರಾಜ |
| **ವಯಸ್ಸು** | ಃ | 43 ವರ್ಷ |
| **ಉದ್ಯೋಗ** | ಃ | ವೈದ್ಯರು, ಮಣಿಪಾಲ್ ಆಸ್ಪತ್ರೆ |
| **ವಾಸ ಸ್ಥಳ** | ಃ | ಬೆಂಗಳೂರು |

**ದಿನಾಂಕಃ 27.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನ್ಯಾಯಾಲಯದಿಂದ ಸಮನು ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ .

ಮೆಡಿಕಲ್ ಬಿಲ್ಲುಗಳನ್ನು **ನಿಪಿ 25** ಎಂದು ಗುರುತಿಸಲಾಯಿತು.

ಮೆಡಿಕಲ್ ಬಿಲ್ಲುಗಳ ಮೊತ್ತವನ್ನು ಯಾವ ರೀತಿಯಲ್ಲಿ ಪಾವತಿ ಮಾಡಿರತ್ತಾರೆ ಎಂದು ದಾಖಲಾತಿಯನ್ನು ಪರಿಶೀಲಿಸಿ ಹೇಳಬೇಕಾಗುತ್ತದೆ. ನಿಪಿ 25 ಗಾಯಾಳುವಿಗೆ ಸಂಬಂಧಪಟ್ಟ ಮೂಲ ಬಿಲ್ಲು ಆಗಿರುತ್ತದೆ.

ಪಿ.ಡಬ್ಲೂ 3

**ಪಾಟೀ ಸವಾಲುಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನಿಪಿ 25ರ ರೀತ್ಯ ಬಿಲ್ಲಿನ ಒಟ್ಟು ಮೊತ್ತ ರೂ.7,90,419/- ಆಗಿದ್ದು, ರೂ.2,30,939/- ಗಳನ್ನು ರಿಯಾಯಿತಿ ನೀಡಲಾಗಿದ್ದು, ಅರ್ಜಿದಾರರು ಒಟ್ಟು ರೂ.5,59,480/- ಗಳನ್ನು ಪಾವತಿಸಿರುತ್ತಾರೆ. ಸದರಿ ಮೊತ್ತವನ್ನು ಅರ್ಜಿದಾರರು ಕುಟುಂಬದವರು ಪಾವತಿ ಮಾಡಿದ ಬಗ್ಗೆ ನಿಪಿ 25 ರಲ್ಲಿ ಉಲ್ಲೇಖ ಇಲ್ಲ. ಗಾಯಾಳು ಅಪ್ರಾಪ್ತ ವಯಸ್ಕನಾದ ಕಾರಣ ಆತ ಬಿಲ್ಲಿನ ಪೂರ್ಣ ಮೊತ್ತವನ್ನು ಪಡೆಯದೇ ಇರಬಹುದು ಎಂದರೆ ಸಾಕ್ಷಿಯು ಅದು ಆಡಳಿತ ಮಂಡಳಿಯ ಮೇಲೆ ಅವಲಂಬಿಸಿರುತ್ತದೆ ಎಂದು ನುಡಿಯುತ್ತಾರೆ. ಆಸ್ಪತ್ರೆಯ ಆಡಳಿತ ಮಂಡಳಿಯವರು ಪೂರ್ಣ ಬಿಲ್ಲಿನ ಮೊತ್ತವನ್ನು waive ಮಾಡಿರುವುದರಿಂದ ಹಣ ಹೇಗೆ ಪಾವತಿಸಲಾಗಿರುತ್ತದೆ ಎಂದು ನಿಪಿ 25 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**